ಶ್ರೀ ವಿ.ಸೋಮಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಹಿರಿಯ ಸದಸ್ಯರಾಗಿದ್ದಾರೆ. ಅದರ ಬಗ್ಗೆ ಎಷ್ಟು ಬೆಳಕು ಚೆಲ್ಲಿದ್ದೇವೆಂಬುದು ತಮಗೂ ಸಹ ಗೊತ್ತಿದೆ. ಯಾವುದೇ ಯೋಜನೆಗಳು ಸುಮಾರು ವರ್ಷಗಳವರೆಗೆ ನಿಂತರೆ ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆಂದು ಅರಿತುಕೊಂಡು 41 ಕೋಟಿ ರೂಪಾಯಿಯನ್ನು ನಮ್ಮ ಸರ್ಕಾರದಿಂದ ಬಿಡುಗಡೆ ಮಾಡಿದ್ದೇವೆ. ಪ್ರಾಯಶಃ ಮಾನ್ಯ ನಾಡಗೌಡರು ಇರಬಹುದು ಅಥವಾ ಇಡೀ ರಾಜ್ಯದಲ್ಲಿ ಈ ರೀತಿಯಾಗಿ ಎಲ್ಲೆಲ್ಲಿ ಆಗಿದೆಯೋ ಆ ಬಗ್ಗೆ ಆಯವ್ಯಯದ ಮೇಲೆ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ತಮ್ಮೆಲ್ಲರನ್ನು ಕರೆಯುತ್ತೇನೆ. ಈ ಬಗ್ಗೆ ಒಂದು ದಿನ ಎಲ್ಲರು ಕುಳಿತುಕೊಂಡು ಚರ್ಚೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಈ ಎಲ್ಲವನ್ನು ಪೂರ್ಣಗೊಳಿಸುವಂಥ ಕೆಲಸವನ್ನು ತಕ್ಷಣವೇ ಮಾಡುವುದಕ್ಕೆ ಸೂಚನೆಯನ್ನು ಕೊಡುತ್ತೇನೆ.

5. ವಿಷಯ:– ತೀರ್ಥಹಳ್ಳಿ ತಾಲ್ಲೂಕು ಬಗರ್ ಹುಕುಂ ಸಮಿತಿ ಪ್ರತ್ಯೇಕವಾಗಿ ಮಂಜೂರು ಮಾಡಿರುವ ಅರ್ಜಿಗಳ ಬಗ್ಗೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):– ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಮಿತಿ ಪ್ರತ್ಯೇಕವಾಗಿ ಮಂಜೂರು ಮಾಡಿರುವ ಅರ್ಜಿಗಳ ಬಗ್ಗೆ ಮಾನ್ಯ ಕಂದಾಯ

ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಯವರು, ಕಂದಾಯ, ಗ್ರಾಮೀಣಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ, ಭೂ ಕಂದಾಯ ಅಧಿನಿಯಮ 1964 ಕಲಂ 94–ಎ(1)ರ ಪ್ರಕಾರ ಪ್ರತಿ ತಾಲ್ಲೂಕಿಗೆ ಬಗರ್ ಹುಕುಂ ಸಮಿತಿ ರಚಿಸಲು ಅವಕಾಶವಿದ್ದು, ಆ ಮೇರೆಗೆ ಬಗರ್ ಹುಕುಂ ಸಮಿತಿಗಳನ್ನು ರಚಿಸಲಾಗುತ್ತಿದೆ. ಅಂತಹ ಸಮಿತಿಗೆ ಸಂಬಂಧಪಟ್ಟ ವಿಧಾನ ಸಭಾ ಸದಸ್ಯರು ಅಧ್ಯಕ್ಷರಾಗಿದ್ದು, ಮೂವರು ಅಧಿಕಾರೇತರ ಸದಸ್ಯರಿರುತ್ತಾರೆ. ಅದಲ್ಲದೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

'ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ರೈತರು ಸಣ್ಣ ಮತ್ತು ಬಡ ರೈತರು ಪ್ರಸ್ತುತ ಹೊಂದಿರುವ ಹಿಡುವಳಿ ಜಮೀನನ್ನು ಒಳಗೊಂಡಂತೆ ಗರಿಷ್ಟ 2 ಹೆಕ್ಟೇರ್ ಮೀರುವಂತಿಲ್ಲ.

ಈ ಹಿಂದೆ ಅಂತಹ ಭೂಮಿಯನ್ನು ಸಕ್ರಮಗೊಳಿಸುವ ಸಲುವಾಗಿ ನಮೂನೆ–50 ರಲ್ಲಿ ಅರ್ಜಿ ಸಲ್ಲಿಸಲು ದಿನಾಂಕ: 19–09–1991ರ ವರೆಗೆ ಅವಕಾಶ ಕಲ್ಪಿಸಲಾಗಿದ್ದು, ನಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ 94ಬಿ ನ್ನು ಸೇರ್ಪಡಿಸಿ, ನಮೂನೆ–53 ರಲ್ಲಿ ದಿನಾಂಕ:30–04–1999ರ ವರೆಗೆ ಅರ್ಜಿ

ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ತದನಂತರದಲ್ಲಿ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ವಿಸ್ತರಿಸಿರುವುದಿಲ್ಲ.

ಬಾಕಿ ಇರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ವಿಲೇಗೊಳಿಸಲು ಆಧಿಸೂಚನೆ ಅಂಖ್ಯೆ: ಸಂವ್ಯಶಾಇ 43 ಶಾಸನ 2011, ದಿನಾಂಕ: 13–01–2012ರ ಅಧಿಸೂಚನೆಯಲ್ಲಿ ಕಾಲಾವಕಾಶವನ್ನು ವಿಸ್ತರಿಸಲಾಗಿದೆ. ಈ ಅವಕಾಶದನ್ವಯ ದಿನಾಂಕ: 25–04–2014ರವರೆಗೆ ಅರ್ಜಿ ವಿಲೇಗೊಳಿಸಲು ಅವಕಾಶವಿರುತ್ತದೆ.

1994 ರಿಂದ 2007 ರವರೆಗೆ ತೀರ್ಥಹಳ್ಳಿ ಬಗರ್ ಹುಕುಂ ಸಮಿತಿಯಲ್ಲಿ ನಮೂನೆ 50 ರಲ್ಲಿ ಸ್ವೀಕೃತವಾದ 10831 ಅರ್ಜಿಗಳಲ್ಲಿ 8382 ಅರ್ಜಿಗಳು ವಿಲೇವಾಡಿಯಾಗಿದ್ದು, ನಮೂನೆ 53 ರಲ್ಲಿ ಸ್ವೀಕೃತವಾದ 15779 ಅರ್ಜಿಗಳಲ್ಲಿ 5949 ಅರ್ಜಿಗಳು ವಿಲೇವಾರಿಯಾಗಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಇದನ್ನು ಕೇಳಿರುವ ಮುಖ್ಯ ಉದ್ದೇಶ ಏನೆಂದರೆ, ನನಗೆ ಒಟ್ಟು ಮೂರು ತಾಲ್ಲೂಕುಗಳು ಬರುತ್ತವೆ. ತಾಲ್ಲೂಕುವಾರು ಮಾನ್ಯ ಸಚಿವರು ಕ್ಲಾರಿಫಿಕೇಷನ್ ಕೊಟ್ಟಿರುವುದು ಸರಿಯಾಗಿದೆ. Being an MLA, I cannot participate in both the taluks. In other two taluks, ಶಿವಮೊಗ್ಗ ತಾಲ್ಲೂಕಿನಲ್ಲಿಯೂ ಸಹ ನನಗೆ 5 ಗ್ರಾಮ

ಪಂಚಾಯಿತಿಗಳು ಬರುತ್ತವೆ. ಹೊಸನಗರದಲ್ಲಿ ಸುಮಾರು 20 ಗ್ರಾಮ ಪಂಚಾಯಿತಿಗಳು ನನ್ನ ವ್ಯಾಪ್ತಿಗೆ ಬರುತ್ತವೆ. I am not a member to the said Bagar Hukum Committee. ಅಲ್ಲಿ ನಮಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಕ್ಲಾರಿಫಿಕೇಷನ್ ಅನ್ನು ಹಿಂದಿನ ಸಾರಿ ನಾನು ಕೇಳಿದ್ದೆ. ಆ ಸಂದರ್ಭದಲ್ಲಿ ಮುಖ್ಯ ಮಂತ್ರಿಯಾಗಿದ್ದಂಥ ಮಾನ್ಯ ಸದಾನಂದ ಗೌಡರು Assembly Segmentwise ಸಮಿತಿ ಮಾಡಿ ಇದನ್ನು reconsider ಮಾಡುತ್ತೇವೆಂಬ ಮಾತನ್ನು ಹೇಳಿದ್ದರು. ಈಗ ಅಲ್ಲಿ ಏನಾಗಿದೆ ಎಂದರೆ, ಅಲ್ಲಿರುವ ಬಗರ್ ಹುಕುಂ ಸಮಿತಿಗೆ ನಾವು ಸದಸ್ಯರಾಗಿರುವುದಿಲ್ಲ. ಆದ್ದರಿಂದ, we cannot participate and we cannot direct. ಇದು ನಿಜವಾಗಿಯೂ ಸಹ problem ಅನ್ನು ಕ್ರಿಯೇಟ್ ಮಾಡಿದೆ. ತಾವು ಈಗ ಕೊಟ್ಟಿರುವ ಕ್ಲಾರಿಫಿಕೇಷನ್ ಸರಿಯಾಗಿದೆ. ಅದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಈಗಾಲೇ ಸಮಯ ಆಗಿಹೋಗಿದೆ. ಆದರೆ, ಮುಂದಿನ ದಿನಗಳಲ್ಲಿ ಆಡಳಿತಾತ್ಮಕವಾಗಿ ನಮಗೆ ಬಹಳ ಸಮಸ್ಯೆ ಆಗುತ್ತದೆ. Assembly segment ನಲ್ಲಿ ನನಗೆ ಮೂರು ತಾಲ್ಲೂಕು ಬರುತ್ತವೆ. ಹೊಸನಗರ ತಾಲ್ಲೂಕಿಗೆ ಮಾನ್ಯ ಬೇಳೂರು ಗೋಪಾಲಕೃಷ್ಣರವರು ಬಗರ್ ಹುಕುಂ ಸಮಿತಿಯ ಛೇರ್ಮನ್ ಆಗಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಹೊಸನಗರ ತಾಲ್ಲೂಕಿನ

ಅರ್ಧ ಭಾಗ ಅವರಿಗೆ ಬರುತ್ತದೆ ಉಳಿದ ಅರ್ಧ ಭಾಗ ನನಗೆ ಬರುತ್ತದೆ. ಆದ್ದರಿಂದ, ಅಲ್ಲಿ ನಾನು ಏನು ಮಾಡಬೇಕು?

ಎರಡು ಹೋಬಳಿ ನನಗೆ ಬರುತ್ತದೆ. ಎರಡು ಹೋಬಳಿ ಅವರಿಗೆ ಬರುತ್ತದೆ. But, I am not a member to the committee. ನಮ್ಮವರಿಗೆ ನಾವು ಏನು ಉತ್ತರವನ್ನು ಕೊಡುವುದು? "Being an M.L.A. I cannot solve their problems.

ಅಧ್ಯಕ್ಷರು: ಉತ್ತರವನ್ನು ಹೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇದೆ. ಎರಡು ತರಹದಲ್ಲಿ ಯೋಚನೆಯನ್ನು ಮಾಡಬೇಕು. ವಿಧಾನಸಭಾ ಕ್ಷೇತ್ರ ಮಟ್ಟದ ಸಮಿತಿಗಳನ್ನು ಮಾಡಬೇಕಾಗುತ್ತದೆ. ಅಥವಾ ಹೆಚ್ಚು ಏರಿಯಾ ಇರುವಂಥ ತಾಲ್ಲೂಕಿಗೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಕಡಿಮೆ ಏರಿಯಾ ಇರುವಂಥ ಶಾಸಕರನ್ನು ಉಪಾಧ್ಯಕ್ಷರನ್ನು ಅಥವಾ ಸದಸ್ಯರನ್ನಾಗಿ ಮಾಡುವ ದಿಕ್ಕಿನಲ್ಲಿ ಒಂದಲ್ಲಾ ಒಂದು ಪ್ರಯತ್ನವನ್ನು ನಡೆಸುತ್ತೇವೆ.

ಅಧ್ಯಕ್ಷರು: ಸದನವನ್ನು ನಾಳೆ ಬೆಳಿಗ್ಗೆ: 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.